ಅ) ವಿಮಾನ ನಿಲ್ದಾಣದ ಕೆಲಸವು ಅಕ್ಟೋಬರ್ 2002ರಲ್ಲಿ ಪ್ರಾರಂಭಗೊಳ್ಳುವ ಮತ್ತು 30 ತಿಂಗಳ ಒಳಗಾಗಿ ಪೂರ್ಣಗೊಳ್ಳುವ ನಿರೀಕ್ಷೆ ಇದೆ. ಪರೀಕ್ಷಾರ್ಥ ಹಾರಾಟಗಳ ನಂತರ ವಿಮಾನ ನಿಲ್ದಾಣವು ಕಾರ್ಯ ಚಟುವಟಿಕೆಗಳನ್ನು 2005ರ 2ನೇ ಅರ್ಧ ವರ್ಷದಲ್ಲಿ ಪ್ರಾರಂಭಿಸುವ ನಿರೀಕ್ಷೆ ಇದೆ.

ಇ) ಈ ಕೆಳಕಂಡಂತೆ ವೆಚ್ಚ ಮಾಡಲಾಗಿದೆ.

1. ಭೂ ಸ್ವಾಧೀನ ರೂ.75.00 ಕೋಟಿ

2. ಪ್ರಾಥಮಿಕ ವೆಚ್ಚ ರೂ.7.80 ಕೋಟಿ

ಚಿಕ್ಕೋಡಿ ಡಿಪೋದ ವ್ಯಾಪ್ತಿಯ ಹಳೆ ಬಸ್ಸುಗಳನ್ನು ಬದಲಿಸುವುದು.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 73(424)

ಸದಸ್ಯರ ಹೆಸರು: ಶ್ರೀ ಕಟ್ಟಿಮನಿ ಮನೋಹರ ಶಿವಪುತ್ರ (ಚಿಕ್ಕೋಡಿ)

ಉತ್ತರಿಸುವ ಸಚಿವರು: ಶ್ರೀ ಸಿ.ಆರ್.ಸಗೀರ್ ಅಹಮದ್(ಸಾರಿಗೆ ಸಚಿವರು)

ಪ್ರಶ್ನೆ

ಅ) ಚಿಕ್ಕೋಡಿ ಘಟಕದ ವ್ಯಾಪ್ತಿಯಲ್ಲಿರುವ ಬಸ್ಸುಗಳು ಹಳೆಯದಾಗಿದ್ದು ಅವು ಪದೇ ಪದೇ ತಾಂತ್ರಿಕ ದೋಷಕ್ಕೆ ಒಳಗಾಗಿ ಪ್ರಯಾಣಿಕರಿಗೆ ತೊಂದರೆಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಹಾಗಿದ್ದಲ್ಲಿ, ಈ ಚಿಕ್ಕೋಡಿ ಘಟಕಕ್ಕೆ ಸುವಿಹಾರಿ ಬಸ್‌ನ್ನೊಳಗೊಂಡಂತೆ ಹೊಸ ಬಸ್‌ಗಳನ್ನು ಹಾಕುವ ವಿಚಾರ ಸರ್ಕಾರಕ್ಕೆ ಇದೆಯೇ?

ಇ) ಅದು ಯಾವಾಗ ಹಾಗೂ ಎಷ್ಟು ದಿನಗಳೊಳಗಾಗಿ ಒದಗಿಸಲಾಗುವುದು?

ಉತ್ತರ

ಅ) ವಾಯುವ್ಯ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆಯ ಚಿಕ್ಕೋಡಿ ಘಟಕಕ್ಕೆ ಒಟ್ಟು 94 ಬಸ್ಸುಗಳನ್ನು ಒದಗಿಸಲಾಗಿರುತ್ತದೆ. ಸಂಸ್ಥೆಯು ಸಾಮಾನ್ಯವಾಗಿ 7.5 ಲಕ್ಷ ಕಿ.ಮೀ.ಗಳನ್ನು ಕ್ರಮಿಸಿ ದುಸ್ಥಿತಿಯಲ್ಲಿರುವ ವಾಹನಗಳನ್ನು ನಿಷ್ಕ್ರಿಯಗೊಳಿಸಿ ಬದಲಾಯಿಸಲು

ಕಾರ್ಯಯೋಜನೆಯನ್ನು ಹಾಕಿಕೊಂಡಿದ್ದು, ಸದರಿ ಕಾರ್ಯ ಯೋಜನೆಯ ಮೇರೆಗೆ 2001-02ನೇ ಸಾಲಿನಲ್ಲಿ ಚಿಕ್ಕೋಡಿ ಘಟಕಕ್ಕೆ ಸೇರಿದ 4 ವಾಹನಗಳನ್ನು ನಿಷ್ಕ್ರಿಯಗೊಳಿಸಲಾಗಿದ್ದು 9 ಹೊಸ ವಾಹನಗಳನ್ನು ಘಟಕಕ್ಕೆ ನೀಡಲಾಗಿರುತ್ತದೆ. ಇದಲ್ಲದೇ ವಾಹನಗಳ ದುರಸ್ತಿ ನಿರ್ವಾಹಣೆ ಕಾರ್ಯಗಳ ಗುಣಮಟ್ಟವನ್ನು ಉತ್ತಮಪಡಿಸಿ ಸುಸ್ಥಿತಿಯಲ್ಲಿರುವ ವಾಹನಗಳನ್ನೇ ಮಾರ್ಗದ ಮೇಲೆ ಕಳುಹಿಸಲು ಕ್ರಮ ಕೈಗೊಳ್ಳಲಾಗಿದ್ದು, ಪ್ರಯಾಣಿಕರಿಗೆ ಯಾವುದೇ ತೊಂದರೆ ಉಂಟಾಗದಂತೆ ನೋಡಿಕೊಳ್ಳಲಾಗುತ್ತಿದೆ.

ಆ) ಚಿಕ್ಕೋಡಿ ಘಟಕಕ್ಕೆ 2 ಉತ್ತಮವಾದ ಸುವಿಹಾರ ಬಸ್ಸುಗಳನ್ನು ನೀಡಲಾಗಿದ್ದು ಅವು ಇಚಲಕರಂಜಿ ಚಿಕ್ಕೋಡಿ-ಬೆಂಗಳೂರು ಮಾರ್ಗದ ಮೇಲೆ ಕಾರ್ಯಚರಣೆಗೊಳಿಸಲಾಗುತ್ತಿದೆ.

ಇ) ಸಧ್ಯಕ್ಕೆ ಈ ತರಹದ ಹೆಚ್ಚುವರಿ ವಾಹನಗಳನ್ನು ಒದಗಿಸುವ ಯೋಜನೆಯು ಇರುವುದಿಲ್ಲ.

ಬೈಲಹೊಂಗಲ ಘಟಕದಲ್ಲಿ ನಿಯಮಿತವಾಗಿ ಬಸ್ ಓಡಿಸದೇ ಇರುವುದು.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 76(341)

ಸದಸ್ಯರ ಹೆಸರು: ಶ್ರೀ ಕೌಜಲಗಿ ಮಹಾಂತೇಶ್ ಶಿವಾನಂದ(ಬೈಲಹೊಂಗಲ)

ಉತ್ತರಿಸುವ ಸಚಿವರು: ಶ್ರೀ ಸಿ.ಆರ್.ಸಗೀರ್ ಅಹಮದ್ (ಸಾರಿಗೆ ಸಚಿವರು)

ಪ್ರಶ್ನೆ

ಅ) ಬೆಳಗಾವಿ ವಿಭಾಗದ ಬೈಲಹೊಂಗಲದ ಘಟಕದಲ್ಲಿ ಕಲೆದ 1 ವರ್ಷದಿಂದ ನಿಯಮಿತವಾಗಿ ಹಾಗೂ ನಿಗದಿತ ವೇಳೆಗೆ ಸರಿಯಾಗಿ ಬಸ್‌ಗಳನ್ನು ಓಡಿಸದೇ ಇರುವುದರಿಂದ ಪ್ರಯಾಣಿಕರಿಗೆ ತುಂಬಾ ತೊಂದರೆಯಾಗುತ್ತಿರುವ ಸಂಗತಿ ಸರ್ಕಾರ ಗಮನಕ್ಕೆ ಬಂದಿದೆಯೇ?

ಆ) ಮೇಲಿಂದ ಮೇಲೆ ಬಸ್‌ಗಳ ರೂಟ್‌ಗಳನ್ನು ರದ್ದುಪಡಿಸುತ್ತಿರುವುದರಿಂದ ಹಾಗೂ ಪ್ರಯಾಣಿಕರಿಗೆ ಯಾವುದೇ ಮುನ್ಸೂಚನೆ ಕೊಡದೇ ಬಸ್ ರೂಟ್‌ಗಳನ್ನು ಬದಲಾಯಿಸುತ್ತಿರುವುದರಿಂದ ಸಾರ್ವಜನಿಕರು ಕಡ್ಡಾಯವಾಗಿ ಟ್ಯಾಕ್ಸಿಗಳನ್ನು ಹತ್ತುವಂತೆ ಮಾಡುತ್ತಿರುವ ಸಂಗತಿ ಸರ್ಕಾರದ ಗಮನಕ್ಕೆ ಬಂದಿದೆಯೇ?